ಇ) ನೇಮಕಾತಿ ಪ್ರಕ್ರಿಯೆ ನಡೆದಿದ್ದು 2005–06 ನೇ ಸಾಲಿನಲ್ಲಿ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಈ) ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇಕಡ 50% ಮುಖ್ಯ ಶಿಕ್ಷಕರ ಹುದ್ದೆಗಳನ್ನು ಬಡ್ತಿ ಮೂಲಕ ಹಾಗೂ ಶೇಕಡ 50% ರಷ್ಟು ನೇರ ನೇಮಕಾತಿ ಮೂಲಕ ತುಂಬಲು ಅವಕಾಶವಿದೆ. ಬಡ್ತಿ ಕೋಟಾದಡಿಯಲ್ಲಿ ಲಭ್ಯವಿರುವ ಹುದ್ದೆಗಳನ್ನು ನಿಯಮ–32 ರಡಿಯಲ್ಲಿ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಅದರಂತೆಯೇ 96 ಅರ್ಹ ಗ್ರೇಡ್–1 ಪ್ರೌಢಶಾಲಾ ಸಹ ಶಿಕ್ಷಕರಿಗೆ ನಿಯಮ–32 ರಡಿಯಲ್ಲಿ ಸ್ಥಳ ನಿಯುಕ್ತಗೊಳಿಸಲಾಗುತ್ತಿದೆ. ಮುಂದುವರೆದು ಬಡ್ತಿ ಕೋಟಾದಲ್ಲಿ ಪ್ರಸ್ತುತ ಲಭ್ಯವಿರುವ 242 ಖಾಲಿ ಹುದ್ದೆಗಳನ್ನು ಸ್ಥಾನಪನ್ನ ಬಡ್ತಿ ಮೂಲಕ ತುಂಬಲು ಅಗತ್ಯವಿರುವ ಬಡ್ತಿ ಪ್ರಸ್ತಾವನೆಯನ್ನು ಅಧೀನ ಕಛೇರಿಗಳಿಂದ ಪಡೆಯಲಾಗುತ್ತಿದ್ದು, ಶೀಘ್ರದಲ್ಲಿಯೇ ಬಡ್ತಿ ನೀಡಲಾಗುವುದು. ಈ ಸ್ಥಳ ನಿಯುಕ್ತಿ ಪ್ರಕ್ರಿಯೆಯಲ್ಲಿ ಖಾಲಿ ಇರುವ ಉಡುಪಿ ಜಿಲ್ಲೆಯ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

5016 (5995) ಶ್ರೀ. ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಗೆ ಕುಡಿಯುವ ನೀರು ಯೋಜನೆಗಾಗಿ ಬಿಡುಗಡೆ ಮಾಡಲಾದ ಹಣ ಎಷ್ಟು) ತಾಲ್ಲೂಕುವಾರು ವಿವರ ನೀಡುವುದು)

ಆ) ಇದರಲ್ಲಿ, ಕೈಪಂಪು, ತೆರೆದ ಬಾವಿ, ಚಿಲುಮೆಬಾವಿ, ಎನ್.ಆರ್.ಡಬ್ಲ್ಯೂ.ಎಸ್., ಎಂ.ಡಬ್ಲ್ಯೂ.ಎಸ್. ಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು; (ವಿವರ ನೀಡುವುದು)

ಬಿ. ಸತ್ಯನಾರಾಯಣ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. :

ಅ) ಶಿವಮೊಗ್ಗ ವ್ಯಾಪ್ತಿಯಲ್ಲಿ 7 ತಾಲ್ಲೂಕುಗಳಿದ್ದು, 2005–06ನೇ ಸಾಲಿನಲ್ಲಿ ನೀರು ಸರಬರಾಜು ಯೋಜನೆಯಡಿ ಜಿಲ್ಲೆಗೆ ಒಟ್ಟಾರೆ ಅನುದಾನ ರೂ.379.34 ಲಕ್ಷ (ಕೇಂದ್ರ + ರಾಜ್ಯ) ಬಿಡುಗಡೆ ಮಾಡಲಾಗಿದೆ.

ಆ) ಈ ಕಾಮಗಾರಿಗಳಿಗಾಗಿ ಎ.ಆರ್.ಡಬ್ಲ್ಯೂ.ಎಸ್.ಪಿ. (ರೂ. 255.34 ಲಕ್ಷ) ಮತ್ತು ಎನ್.ಆರ್. ಡಬ್ಲ್ಯೂ.ಎಸ್. ಪಿ. (ರೂ.124.0 ಲಕ್ಷ) ಅಡಿಯಲ್ಲಿ ಒಟ್ಟು ರೂ. 379.34 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

5017 (5996) ಶ್ರೀ. ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೊಸನಗರ ತಾಲ್ಲೂಕಿನ ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯತ್ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನಿಂದ ತೆಗೆದ ತೆರೆದ ಬಾವಿಗಳ ಸಂಖ್ಯೆ ಎಷ್ಟು;